Upgrading of Maddur Dispensary

810. **Sri A. D. BILI GOWDA** (Maddur).—

Will the Minister for Health be pleased to state :—

(*a*) whether there is any proposal to up-grade the Combined Dispensary at Maddur into a General Hospital ;

(*b*) whether the concerned Taluk Development Board and the Municipality have given their concurrence to meet the expenditure ;

(c) whether the dispensary at Gejjalagere is to be removed and the same staff continued at Maddur ?

Sri H. SIDDAVEERAPPA (Minister for Health).—

(*a*) No.

(*b*) No.

(*c*) There are no such proposals for the present.

ಶ್ರೀ ಎ. ಡಿ. ಬಿಳಿಗೌಡ.—ಮದ್ದೂರು ತಾಲ್ಲೂಕು ಪೌರರ ಹಿತದೃಷ್ಟಿಯಿಂದ ಮದ್ದೂರಿನ ಕಂಬೈನ್ಡ್ ಡಿಸ್ಪೆನ್ಸರಿಯನ್ನು ಮೇಲ್ದರ್ಜೆಗೇರಿಸಿ ಅಲ್ಲಿ ಎಕ್ಸ್‌ರೇ, ಬ್ಲಡ್ ಬ್ಯಾಂಕ್, ಹುಚ್ಚು ನಾಯಿ ಕಡಿತದ ಟ್ರೀಟ್‌ಮೆಂಟ್ ಮಾಡುವುದಕ್ಕೆ ಸೌಲಭ್ಯ ಮುಂತಾದುವುನ್ನು ಕಲ್ಪಿಸುವಿರಾ ? ಇದಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು ನಹ ವಹಿಸುವುದಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಹಾಗೂ ಪುರಸಭೆಗಳು ಒಪ್ಪಿರುವುದಾಗಿ ತಿಳಿದುಬಂದಿರುವುದರಿಂದ ಶೀಘ್ರವಾಗಿ ಈ ಮದ್ದೂರು ಕಂಬೈನ್ಡ್ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವಿರಾ ?

† ಶ್ರೀ ಎಚ್. ಸಿದ್ದವೀರಪ್ಪ.—ಪ್ರಯತ್ನಮಾಡೋಣ. ಮದ್ದೂರು ತಾಲ್ಲೂಕು ಸ್ಥಳಿ, ನೀವೂ ಸಹ ಮುಂದೆ ಬರಬೇಕು, ಆದು ಅನುಕೂಲವಾದ ಜಾಗ, ಸರಕಾರಕ್ಕೆ ಸ್ವಲ್ಪ ದ್ರವ್ಯ ಸಹಾಯ ಮಾಡಿ ದಾನಿಗಳು ಉದಾರವಾಗಿ ಸಹಾಯಮಾಡಲು ಮುಂದೆ ಬಂದರೆ ಸರಕಾರದವರು ಅಲ್ಲಿಗೆ ಒಳ್ಳೆ ಸೌಕರ್ಯ ಕೊಡಲು ಪ್ರಯತ್ನ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ದಾನಿಗಳು ಮುಂದೆ ಬರಬೇಕೆಂದು ಹೇಳಿದರು. ಬೆಂಗಳೂರಿನಲ್ಲಿ ಆಸ್ಪತ್ರೆ ಬಡಾವಣೆ ಮಾಡುವಾಗ ಸೌಕರ್ಯ ಒದಗಿಸುವಾಗ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕಡೆ ನೋಡುವುದಿಲ್ಲ, ತಾಲ್ಲೂಕುಗಳಲ್ಲಿ ಸೌಕರ್ಯ ಕೇಳಿದರೆ ಪಾಪುಲರ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಒತ್ತಾಯಮಾಡುವರು. ಗ್ರಾಮಾಂತರ ಪ್ರದೇಶಗಳಲ್ಲಿ ಅನುಕೂಲ ಜೆನ್ನಾಗಿ ಮಾಡುವುದಾಗಿ ಅಧಿಕಾರ ವಹಿಸಿಕೊಂಡಾಗ ಮಂತ್ರಿಗಳು ಹೇಳಿದರು. ಹಾಗೆ ಹೇಳಿ ಈಗ ಎಲ್ಲಾ ತಾಲ್ಲೂಕುಗಳವರೂ ಪಾಪ್ಯುಲರ್ ಕಾಂಟ್ರಿಬೂಷ್ಯನ್ ಕೊಡಬೇಕೆಂದು ಕೇಳದೆ ಸರಕಾರದವರೇ ಬೇಕಾದ ಅನುಕೂಲತೆ ಒದಗಿಸಲು ಪ್ರಯತ್ನಮಾಡುವರೇ ?

ಶ್ರೀ ಎಚ್. ಸಿದ್ದವೀರಪ್ಪ.—ಸರಕಾರ ಹಳ್ಳಿಗಳ ಕಡೆ ಗಮನ ಕೊಡುವುದಾಗಿ ಹೇಳಿದ್ದು ನಿಜ. ಬೆಂಗಳೂರಿನಲ್ಲಿರುವ ವಿಕ್ಟೋರಿಯ ಆಸ್ಪತ್ರೆ ಮತ್ತು ಇತರ ಆಸ್ಪತ್ರೆಗಳು ಮತ್ತ ಮೈಸೂರಿನಲ್ಲಿರುವ ಆಸ್ಪತ್ರೆಗಳು ಇವುಗಳಲ್ಲಿ ಅನುಕೂಲ ಪಡೆಯುತ್ತಿರುವ ಜನರ ಅಂಕಿಅಂಶ ನೋಡಿದರೆ ಬರೀ ಬೆಂಗಳೂರು, ಮೈಸೂರಿನವರು ಮಾತ್ರ ಅನುಕೂಲ ಪಡೆಯುತ್ತಿಲ್ಲ, ಹೊರಗಿನವರೂ ಅವುಗಳಿಂದ ಅನುಕೂಲ ಪಡೆದಿದ್ದಾರೆ. ನಾನು ಹೇಳಿದ್ದು ಎಲ್ಲಾ ಕಡೆಗೂ ಅನುಕೂಲ ಕೇಳುತ್ತಿದ್ದಾರೆ, ಅವರು ಮುಂದೆ ಬಂದು ಸರಕಾರಕ್ಕೆ ಸಹಾಯಮಾಡಿದರೆ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇಕಾದ ಸೌಕರ್ಯ ಒದಗಿಸಬಹುದು ಎಂದು. ಮುಂದಿನ ಯೋಜನೆಯಲ್ಲಿ ಈಗ ಕೇಳಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯಕ್ರಮ ಕೈಕೊಳ್ಳುತ್ತೇವೆ. ಮುಂದಿನ ವರ್ಷ ಹೊಸ ಯೋಜನೆ ಪ್ರಾರಂಭವಾಗುವುದು, ಆಗ ಮಾಡಬೇಕೆಂಬ ಉದ್ದೇಶವಿದೆ. ಅದಕ್ಕೆ ನೀವೂ ಸಹಾಯಮಾಡಬೇಕೆಂದು ಹೇಳಿದೆ.

ಶ್ರೀ ಎ. ಡಿ. ಬಿಳಿಗೌಡ.—ಅಲ್ಲಿ ಹುಚ್ಚುನಾಯಿಗಳಿಂದ ಕಡಿಸಿಕೊಂಡು ಔಷಧಿಗಾಗಿ ಬರುವ ವರ ಸಂಖ್ಯೆ ಹೆಚ್ಚಾಗಿ ಜನರು ಕ್ಯೂ ನಿಲ್ಲಬೇಕಾಗಿದೆ. ಮಂಡ್ಯ ಜನರಲ್ ಆಸ್ಪತ್ರೆಯಲ್ಲಿ ಮಾತ್ರ ಆದಕ್ಕೆ ಸೌಲಭ್ಯವಿದೆ. ಆದುದರಿಂದ ಶೀಘ್ರವಾಗಿ ಹುಚ್ಚುನಾಯಿ ಕಡಿದವರಿಗೆ ತಾಲ್ಲೂಕು ಹೆಡ್ ಕ್ವಾರ್ಟರು ಆಸ್ಪತ್ರೆಯಲ್ಲಿ ಅನುಕೂಲ ಕಲ್ಪಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹುಚ್ಚುನಾಯಿಗಳಿದ್ದರೆ ಅವನ್ನು ಕೊಲ್ಲುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ. ಯೆಂಕಟಪ್ಪ.—ತಾಲ್ಲೂಕು ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯಾಗಿ ಬದಲಾಯಿಸಲು ತಾಲ್ಲೂಕು ಅಭಿವೃದ್ಧಿ ಮಂಡಲ ಮತ್ತು ಪುರಸಭೆಗಳು ವಂತಿಗೆ ಕೊಡಬೇಕೆಂದು ಆದೇಶ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಜನರಲ್ ಆಸ್ಪತ್ರೆ ತಾಲ್ಲೂಕು ಮಟ್ಟದಲ್ಲಿ ಮಾಡುವುದಕ್ಕಾಗುವುದಿಲ್ಲ, ಇರುವುದನ್ನು ಅಪ್‌ಗ್ರೇಡ್ ಮಾಡಬೇಕು. ಅದಕ್ಕೆ ಜನರು ಮುಂದೆ ಬಂದು ಸಹಾಯ ನೀಡಿದರೆ ಅನುಕೂಲವಾಗುವುದು ಎಂದು ಹೇಳಿದೆ. ಮೊನ್ನೆ ಗೌರಿಬಿದನೂರಿನವರು ಸುಮಾರು 2 ಲಕ್ಷ ರೂಪಾಯಿಗಳನ್ನು ಕೊಟ್ಟರು. ಇಷ್ಟೇ ಕೊಡಬೇಕೆಂದಿಲ್ಲ, ಅನುಕೂಲವಿರುವವರು ಮುಂದೆ ಬಂದು ಕೈಲಾದ ಸಹಾಯಮಾಡಿದರೆ ಸರಕಾರ ತನ್ನಲ್ಲರುವುದನ್ನು ಹಾಕಿ ಕೆಲಸಮಾಡಬಹುದು.

ಶ್ರೀ ಕೆ. ಯೆಂಕಟಪ್ಪ.—ತಾಲ್ಲೂಕು ಅಭಿವೃದ್ಧಿ ಮಂಡಲ ಮತ್ತು ಪುರಸಭೆಗಳು ವಂತಿಗೆ ಬಗ್ಗೆ ಬಜೆಟ್ಟಿನಲ್ಲಿ ಅವಕಾಶಮಾಡಿ ಇಂಥ ಆಸ್ಪತ್ರೆ ಮಾಡಬೇಕು ಎಂದು ಕೇಳುವಂತೆ ಆದೇಶ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಕೊಡುವುದಕ್ಕಾಗುವುದಿಲ್ಲ, ಹಣ ಕೊಟ್ಟರೆ ತೆಗೆದುಕೊಳ್ಳುತ್ತೇವೆ. ಇದಕ್ಕೆ ಜಿ. ಓ. ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ಗೆಜ್ಜಲಗೆರೆ ಆಸ್ಪತ್ರೆಯನ್ನು ಹತ್ತಾರು ವರ್ಷಗಳ ಹಿಂದೆಯೇ ಪುದ್ದೂರಿಗೆ ವರ್ಗಾಯಿಸಲಾಗಿದೆ. ಈಗ ಗೆಜ್ಜಲಗೆರೆಯಲ್ಲಿ ಆಸ್ಪತ್ರೆಯಿಲ್ಲ, ಹಿಂದಿತ್ತು. ಈಗ ತೆಗೆದಿದ್ದಾರೆ. ಪುನಃ ಅಲ್ಲಿಗೆ ಆಸ್ಪತ್ರೆ ಕೊಡಲು ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲಿಸುತ್ತೇವೆ.

Restoration of Annigopalaiah Tank

875. Sri HANJI SHIVANNA (Tarikere).—

Will the Minister for Public Works and Electricity be pleased to state:—

(*a*) the number of years passed after the repairs to Annigopalaiah tank of Ajjampura Hobli in Tarikere Taluk ;

(*b*) when the waste-weir of the tank was constructed whether it is repaired now, if not when it will be repaired ;

(*c*) whether a channel has been constructed to facilitate irrigation ;

(*d*) if not, the reasons therefor ?

Sri H. M. CHANNABASAPPA (Minister for Public Works and Electricity) —

(*a*) The restoration work of this tank was done in 1899. The repair work of the tank was done in 1965-66 and 1968-69.